www.shikarat.com

KEA Compulsory Kannada Question Paper 20-07-2024

| ವಿಷಯ | ವಿಷಯ ಸಂಕೇತ | ಸಮಯ | ಪ್ರಶ್ನಪತ್ರಿಕೆಯ ವರ್ಷನ್ ಕೋಡ್ |
|---|---|---|---|
| ಕಡ್ಡಾಯ ಕನ್ನಡ | 01 | ಮ.2:30 ರಿಂದ ಮ.4:30 (2 Hours) | **B** |

| ಉತ್ತರಿಸಲು ಇರುವ ಗರಿಷ್ಠ ಅವಧಿ | ಗರಿಷ್ಠ ಅಂಕಗಳು | ಒಟ್ಟು ಪ್ರಶ್ನೆಗಳು | ಪ್ರತಿ ಪ್ರಶ್ನೆಗೆ ಅಂಕಗಳು | ನಿಮ್ಮ ನೋಂದಣಿ ಸಂಖ್ಯೆಯನ್ನು ಬರೆಯಿರಿ |
|---|---|---|---|---|
| 120 ನಿಮಿಷಗಳು | 150 | 100 | 1.5 | |

ಪ್ರಶ್ನೆಪತ್ರಿಕೆಯ ಕ್ರಮ ಸಂಖ್ಯೆ

SEAL

**ಮಾಡಿ:**

1. ಕೊಠಡಿ ಮೇಲ್ವಿಚಾರಕರಿಂದ ಈ ಪ್ರಶ್ನೆ ಪತ್ರಿಕೆಯನ್ನು ನಿಮಗೆ ಮ. 2:25 ಆದ ನಂತರ ಕೊಡಲಾಗಿರುತ್ತದೆ.
2. ಅಭ್ಯರ್ಥಿಗಳು ನೋಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
3. ಪ್ರಶ್ನೆ ಪತ್ರಿಕೆಯ ವರ್ಷನ್ ಕೋಡ್ ಅನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆ ಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮ ಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಪೂರ್ಣ ಸಹಿ ಮಾಡಬೇಕು.

**ಮಾಡಬೇಡಿ:**


1. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ ಮಾರ್ಕ್‌ನ್ನು ತಿದ್ದಬಾರದು/ ಹಾಳುಮಾಡಬಾರದು/ ಅಳಿಸಬಾರದು.
2. ಮೂರನೇ ಬೆಲ್ ಮ. 2:30 ಕ್ಕೆ ಆಗುತ್ತದೆ. ಅಲ್ಲಿಯವರೆಗೂ,
   - ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ಅನ್ನು ತೆಗೆಯಬಾರದು.
   - ಪ್ರಶ್ನೆ ಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.

SHIKARAT.COM


**ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು**

1. ಪ್ರಶ್ನೆಗಳಲ್ಲಿ ಬಳಸಿರುವ Signs and symbols ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.
2. ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ 4 ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ. ಋಣಾತ್ಮಕ ಮೌಲ್ಯಮಾಪನವಿರುವುದಿಲ್ಲ.
3. ಮೂರನೇ ಬೆಲ್ ಅಂದರೆ ಮ. 2:30ರ ನಂತರ ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆ ಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಐಟಂಗಳು ಬಿಟ್ಟುಹೋಗಿದ್ದಲ್ಲಿ ಎಂಬುದನ್ನು ಖಚಿತಪಡಿಸಿಕೊಂಡು, ಈ ರೀತಿ ಆಗಿದ್ದರೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.

ಸರಿಯಾದ ಕ್ರಮ / CORRECT METHOD



ತಪ್ಪು ಕ್ರಮಗಳು / WRONG METHODS



5. ಈ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ರಫ್ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ, ಇದಕ್ಕೆ ಉಪಯೋಗಿಸಬೇಡಿ.
7. ಕೊನೆಯ ಬೆಲ್ ಅಂದರೆ ಸಂಜೆ. 4:30 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ.
8. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
9. ಕೊಠಡಿ ಮೇಲ್ವಿಚಾರಕರು ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತನ್ನ ವಶದಲ್ಲಿ ಇಟ್ಟುಕೊಂಡು ತಳಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.

# Compulsory Kannada Exam Key Answer - 20.07.2024

22.07.2024

Compulsory kannada Exam -20.07.2024

Answer Keys

| Q.No | A | B | C | D |
|---|---|---|---|---|
| 1 | 2 | 1 | 3 | 2 |
| 2 | 2 | 3 | 3 | 1 |
| 3 | 2 | 3 | 1 | 1 |
| 4 | 3 | 3 | 3 | 3 |
| 5 | 2 | 3 | 3 | 2 |
| 6 | 2 | 3 | 2 | 2 |
| 7 | 4 | 2 | 1 | 4 |
| 8 | 4 | 2 | 1 | 2 |
| 9 | 3 | 4 | 2 | 3 |
| 10 | 3 | 3 | 1 | 4 |
| 11 | 1 | 1 | 4 | 2 |
| 12 | 3 | 2 | 2 | 3 |
| 13 | 2 | 3 | 3 | 4 |
| 14 | 1 & 2 | 4 | 3 | 3 |
| 15 | 2 | 1 | 2 | 2 |
| 16 | 4 | 3 | 2 | 1 |
| 17 | 1 | 2 | 2 | 4 |
| 18 | 3 | 3 | 4 | 1 |
| 19 | 3 | 2 | 2 | 2 |
| 20 | 4 | 2 | 4 | 3 |
| 21 | 4 | 1 | 3 | 4 |
| 22 | 2 | 2 | 2 | 2 |
| 23 | 1 | 4 | 2 | 1 |
| 24 | 3 | 3 | 2 | 1 |
| 25 | 2 | 4 | 3 | 1 |
| 26 | 1 | 2 | 1 | 3 |
| 27 | 1 | 2 | 3 | 3 |
| 28 | 3 | 2 | 3 | 3 |
| 29 | 2 | 3 | 3 | 1 |
| 30 | 2 | 2 | 3 | 3 |
| 31 | 4 | 2 | 3 | 3 |
| 32 | 2 | 4 | 2 | 2 |
| 33 | 3 | 4 | 2 | 1 |
| 34 | 4 | 3 | 4 | 1 |
| 35 | 2 | 3 | 3 | 2 |
| 36 | 3 | 1 | 1 | 1 |
| 37 | 4 | 3 | 2 | 4 |
| 38 | 3 | 2 | 3 | 2 |
| 39 | 2 | 1 & 2 | 4 | 3 |
| 40 | 1 | 2 | 1 | 3 |
| 41 | 4 | 4 | 3 | 2 |
| 42 | 1 | 1 | 2 | 2 |
| 43 | 2 | 3 | 3 | 2 |
| 44 | 3 | 3 | 2 | 4 |
| 45 | 4 | 4 | 2 | 2 |
| 46 | 2 | 4 | 1 | 4 |
| 47 | 1 | 2 | 2 | 3 |
| 48 | 1 | 1 | 4 | 2 |
| 49 | 1 | 3 | 3 | 2 |
| 50 | 3 | 2 | 4 | 2 |

Compulsory kannada Exam -20.07.2024

Answer Keys

| Q.No | A | B | C | D |
|---|---|---|---|---|
| 51 | 3 | 1 | 2 | 3 |
| 52 | 3 | 1 | 2 | 1 |
| 53 | 1 | 3 | 2 | 3 |
| 54 | 3 | 2 | 3 | 3 |
| 55 | 3 | 2 | 2 | 3 |
| 56 | 2 | 4 | 2 | 3 |
| 57 | 1 | 2 | 4 | 3 |
| 58 | 1 | 3 | 4 | 2 |
| 59 | 2 | 4 | 3 | 2 |
| 60 | 1 | 2 | 3 | 4 |
| 61 | 4 | 3 | 1 | 3 |
| 62 | 2 | 4 | 3 | 1 |
| 63 | 3 | 3 | 2 | 2 |
| 64 | 3 | 2 | 1 & 2 | 3 |
| 65 | 2 | 1 | 2 | 4 |
| 66 | 2 | 4 | 4 | 1 |
| 67 | 2 | 1 | 1 | 3 |
| 68 | 4 | 2 | 3 | 2 |
| 69 | 2 | 3 | 3 | 3 |
| 70 | 4 | 4 | 4 | 2 |
| 71 | 3 | 2 | 4 | 2 |
| 72 | 2 | 1 | 2 | 1 |
| 73 | 2 | 1 | 1 | 2 |
| 74 | 2 | 1 | 3 | 4 |
| 75 | 3 | 3 | 2 | 3 |
| 76 | 1 | 3 | 1 | 4 |
| 77 | 3 | 3 | 1 | 2 |
| 78 | 3 | 1 | 3 | 2 |
| 79 | 3 | 3 | 2 | 2 |
| 80 | 3 | 3 | 2 | 3 |
| 81 | 3 | 2 | 4 | 2 |
| 82 | 2 | 1 | 2 | 2 |
| 83 | 2 | 1 | 3 | 4 |
| 84 | 4 | 2 | 4 | 4 |
| 85 | 3 | 1 | 2 | 3 |
| 86 | 1 | 4 | 3 | 3 |
| 87 | 2 | 2 | 4 | 1 |
| 88 | 3 | 3 | 3 | 3 |
| 89 | 4 | 3 | 2 | 2 |
| 90 | 1 | 2 | 1 | 1 & 2 |
| 91 | 3 | 2 | 4 | 2 |
| 92 | 2 | 2 | 1 | 4 |
| 93 | 3 | 4 | 2 | 1 |
| 94 | 2 | 2 | 3 | 3 |
| 95 | 2 | 4 | 4 | 3 |
| 96 | 1 | 3 | 2 | 4 |
| 97 | 2 | 2 | 1 | 4 |
| 98 | 4 | 2 | 1 | 2 |
| 99 | 3 | 2 | 1 | 1 |
| 100 | 4 | 3 | 3 | 3 |

www.shikarat.com

www.shikarat.com

1. ಇಲ್ಲಿ ಗುಣಸಂಧಿಗೆ ಉದಾಹರಣೆಯಾದ ಪದ ಯಾವುದು?

(1) ದೇವೇಂದ್ರ

(2) ಲೋಕೈಕ

(3) ದೇವಾಲಯ

(4) ದಿಗಂತ

2. 'ಝ' ಎಂಬ ವರ್ಣವನ್ನು ಹೊರತುಪಡಿಸಿದಾಗ ಕನ್ನಡ ವರ್ಣಗಳ ಸಂಖ್ಯೆ

(1) 52

(2) 51

(3) 49

(4) 50

3. 'ಉದ್ದೀಪಿತ' ಪದದ ಅರ್ಥ _____.

(1) ಒಳ್ಳೆಯ

(2) ಸಾಕಷ್ಟು

(3) ಪ್ರಚೋದಿತ

(4) ಸಂಕಟ

4. 'ಸುಸಂಗತ' ಈ ಪದದ ಅರ್ಥ _____.

(1) ಇಂಪಾದ

(2) ಜೊತೆಯಾದ

(3) ಯೋಗ್ಯವಾದ

(4) ವಿಶೇಷವಾದ

5. 'ಅರ್ಹ' ಪದದ ವಿರುದ್ಧ ಪದ _____.

(1) ನಿರಾರ್ಹ

(2) ಅನಾರ್ಹ

(3) ಅನರ್ಹ

(4) ನಿರರ್ಹ

SHIKARAT.COM

www.shikarat.com

6. 'ನಾಸ್ತಿಕ' ಪದದ ಅರ್ಥ ______.

(1) ದೈವ ಭಕ್ತ

(2) ದೇವರನ್ನು ನಂಬಿದವ

(3) ದೇವರಲ್ಲಿ ನಂಬಿಕೆ ಇಲ್ಲದವನು

(4) ದಾರ್ಶನಿಕ

7. 'ಚೆನ್ನಮಲ್ಲಿಕಾರ್ಜುನ' ಇದು ಇವರ ವಚನಗಳ ಅಂಕಿತ ನಾಮ

(1) ಬಸವಣ್ಣ

(2) ಅಕ್ಕಮಹಾದೇವಿ

(3) ಜೇಡರ ದಾಸಿಮಯ್ಯ

(4) ಕನಕದಾಸ

8. 'ಕನ್ನಡದ ಕಣ್ವ' ಎಂದು ಇವರನ್ನು ಕರೆಯುತ್ತಾರೆ

(1) ಎಂ. ಚಿದಾನಂದ ಮೂರ್ತಿ

(2) ಬಿ.ಎಂ. ಶ್ರೀಕಂಠಯ್ಯ

(3) ಕುವೆಂಪು

(4) ಎಂ. ಗೋವಿಂದ ಪೈ

9. ಇವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ :

(1) ಯು.ಆರ್. ಅನಂತಮೂರ್ತಿ

(2) ಗಿರೀಶ ಕಾರ್ನಾಡ್

(3) ಚಂದ್ರಶೇಖರ್ ಕಂಬಾರ

(4) ಎಂ. ಗೋಪಾಲಕೃಷ್ಣ ಅಡಿಗ

10. ಸ್ಥಾನಪಲ್ಲಟವಾಗಿರುವ ಪದಗಳನ್ನು ಅರ್ಥಪೂರ್ಣ ವಾಕ್ಯವಾಗಿ ಪರಿವರ್ತಿಸಿ :

ಮಂಜಿನ (p) ಮುಂಜಾನೆಯಲ್ಲಿ (q) ಹನಿ (r) ಮೂಡಿದೆ (s)

(1) r s p q

(2) s q r p

(3) q p r s

(4) q r p s

SHIKARAT.COM

www.shikarat.com

11. ಅಕರ್ಮಕ ಧಾತುವಿಗೆ ಉದಾಹರಣೆ

(1) ಮಲಗು

(2) ನೆಡು

(3) ತಿನ್ನು

(4) ತೊಡು

12. '[illegible]' ಎಂಬ ಶಬ್ದಕ್ಕೆ ಚತುರ್ಥಿ ವಿಭಕ್ತಿಯಲ್ಲಿ ಸೇರುವ ಪ್ರತ್ಯಯ ______.

(1) ಇಕ್ಕೆ

(2) ಕ್ಕೆ

(3) ಇಗೆ

(4) ಗೆ

13. 'ಬರೆಯುತ್ತಾನೆ' ಈ ಪದದಲ್ಲಿರುವ ಧಾತು

(1) ಬರೆಯುತ್ತಾ

(2) ಬರೆಯು

(3) ಬರೆ

(4) ಬರೆದ

14. 'ಅ' ಪಟ್ಟಿಯಲ್ಲಿನ ವಿಭಕ್ತಿಗಳೊಂದಿಗೆ 'ಬ' ಪಟ್ಟಿಯಲ್ಲಿನ ಕಾರಕಾರ್ಥಗಳನ್ನು ಹೊಂದಿಸಿರಿ :

| ಅ | ಬ |
|---|---|
| (a) ಪ್ರಥಮಾ | (i) ಕರಣಾರ್ಥ |
| (b) ತೃತೀಯಾ | (ii) ಅಪಾದಾನ |
| (c) ಚತುರ್ಥೀ | (iii) ಕರ್ತೃರ್ಥ |
| (d) ಪಂಚಮೀ | (iv) ಸಂಪ್ರದಾನ |

ಉತ್ತರಗಳ ಸೂಚಿ :

| | (a) | (b) | (c) | (d) |
|---|---|---|---|---|
| (1) | (ii) | (iv) | (i) | (iii) |
| (2) | (ii) | (i) | (iv) | (iii) |
| (3) | (iii) | (iv) | (ii) | (i) |
| (4) | (iii) | (i) | (iv) | (ii) |

15. 'ಅವನು ಚೆನ್ನಾಗಿ ಬರೆದನು' ಇಲ್ಲಿರುವ ಕಾಲಸೂಚಕ ಪ್ರತ್ಯಯ

(1) ದ

(2) ವ

(3) ನು

(4) ಅನು

16. 'ಆಧಾರ' ಪದದ ವಿರುದ್ಧ ಪದ

(1) ಅಧರ

(2) ನಿರ್ಧಾರ

(3) ನಿರಾಧಾರ

(4) ಅಧಾರ



SHIKARAT.COM

www.shikarat.com

17. 'ಕುಠಾರ' ಪದದ ತದ್ಭವ ರೂಪ ______.

(1) ಖಡುಗ

(2) ಕೊಡಲಿ

(3) ಗುದ್ದಲಿ

(4) ಕಠಾರಿ

18. ಒಂದು ಪದಕ್ಕೆ ಸಮಾನಾರ್ಥಕ ಪದವನ್ನು ಸೂಚಿಸಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

(1) ಪೂರ್ಣ ವಿರಾಮ

(2) ಉದ್ಧರಣ ಚಿಹ್ನೆ

(3) ಆವರಣ ಚಿಹ್ನೆ

(4) ವಿವರಣಾತ್ಮಕ ಚಿಹ್ನೆ

19. 'ಇಸವಾಸ' ಪದದ ಗ್ರಾಂಥಿಕ ರೂಪ ______.

(1) ಇಷ್ಟು ದಿವಸ

(2) ವಿಶ್ವಾಸ

(3) ಇಲ್ಲಿ ವಾಸ

(4) ಸಹವಾಸ

SHIKARAT.COM

20. ಗಾದೆ ಮಾತನ್ನು ಪೂರ್ಣಗೊಳಿಸಿ :

'ದೂರದ ಬೆಟ್ಟ ______'

(1) ಹತ್ತುವುದು ಸುಲಭ

(2) ಕಣ್ಣಿಗೆ ನುಣ್ಣಗೆ

(3) ಪಶ್ಚಿಮ ಘಟ್ಟ

(4) ಒಂದಕ್ಕೊಂದು ಅಡ್ಡ

www.shikarat.com

21. 'ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ' ಈ ಗಾದೆ ಮಾತಿನ ಅರ್ಥ

(1) ಜಿಪುಣತನ

(2) ಅತಿಯಾದ ಪ್ರೀತಿ

(3) ಮಹಾ ಉದಾರಿ

(4) ಸರಿಯಾದ ಹಂಚಿಕೆ

22. 'ಕರ್ಚೀಫ್' ಈ ಪದದ ಕನ್ನಡ ರೂಪ

(1) ಪಂಚೆ

(2) ಕರವಸ್ತ್ರ

(3) ಅಂಗಿ

(4) ಮುಂಡಾಸು

23. 'ಯೂನಿವರ್ಸಿಟಿ' ಈ ಪದದ ಕನ್ನಡ ರೂಪ

(1) ಕಾಲೇಜು

(2) ಶಾಲೆ

(3) ಕೇಂದ್ರೀಯ ವಿದ್ಯಾಲಯ

(4) ವಿಶ್ವವಿದ್ಯಾಲಯ

24. '<u>ಅವನು</u> ನಾಳೆ ಬೆಂಗಳೂರಿಗೆ ಹೋಗುವನು.' ಇಲ್ಲಿ ಅಡಿ ಗೆರೆ ಎಳೆದ ಸರ್ವನಾಮ ಪದವನ್ನು ಗುರುತಿಸಿ :

(1) ಉತ್ತಮ ಪುರುಷ

(2) ಮಧ್ಯಮ ಪುರುಷ

(3) ಪ್ರಥಮ ಪುರುಷ

(4) ಆತ್ಮಾರ್ಥಕ ಸರ್ವನಾಮ

25. 'ಅಂಗಳ' ಪದದ ತತ್ಸಮ ರೂಪ ಯಾವುದು?

(1) ಅಂಕಾಣ

(2) ಅಂಗಾಳ

(3) ಅಂಗಳಾ

(4) ಅಂಕಣ

SHIKARAT.COM

www.shikarat.com

26. 'ಹೊಳೆಯಲ್ಲಿ ಹುಣಸೆಹಣ್ಣು ತೊಳೆ' ಪದಕ್ಕೆ ಸಮಾನಾರ್ಥಕ ರೂಪ ______.

(1) ಬಹಳ ಮೆಚ್ಚು

(2) ವ್ಯರ್ಥ

(3) ಸಾಕಷ್ಟು

(4) ಕೂಡಿಸು

27. ಕನ್ನಡದಲ್ಲಿ ದೊರೆತಿರುವ ಮೊದಲ ಕಾವ್ಯವೆಂದು ಈ ಕೃತಿಯನ್ನು ಪರಿಗಣಿಸಲಾಗಿದೆ :

(1) ಕವಿರಾಜಮಾರ್ಗ

(2) ಆದಿಪುರಾಣ

(3) ಸಾಹಸಭೀಮ ವಿಜಯ

(4) ಶಬ್ದಮಣಿ ದರ್ಪಣ

28. ಅಕರ್ಮಕ ಧಾತುವಿಗೆ ಉದಾಹರಣೆಯಾದ ಪದ ______.

(1) ಮಾಡು

(2) ಓಡು

(3) ಕೂಡು

(4) ತೊಡು

29. 'ಸೊಗಸಾಗಿ' ಎನ್ನುವುದು ______ ಅವ್ಯಯ.

(1) ಅನುಕರಣಾ

(2) ಕ್ರಿಯಾರ್ಥಕ

(3) ಸಾಮಾನ್ಯ

(4) ಸಂಬಂಧಾರ್ಥಕ

30. ಇಲ್ಲಿರುವ 'ಅನ್ವರ್ಥಕ' ಪದ ಯಾವುದು?

(1) ಸೀತೆ

(2) ವಿಜ್ಞಾನಿ

(3) ನದಿ

(4) ಅವನು

31. 'ಆತ್ಮಾರ್ಥಕ' ಸರ್ವನಾಮಕ್ಕೆ ಉದಾಹರಣೆ ______.

(1) ನೀನು

(2) ತಾನು

(3) ನಾನು

(4) ಅವನು

SHIKARAT.COM



[ P. T. O.

www.shikarat.com

32. 'ಸಪ್ತಮಿ' ವಿಭಕ್ತಿ ಕಾರಕಾರ್ಥ ಯಾವುದು?

(1) ಅಪಾದಾನ

(2) ಸಂಪ್ರದಾನ

(3) ಸಂಬಂಧ

(4) ಅಧಿಕರಣ

33. ಪೂರ್ವಪದ ಸಂಖ್ಯಾವಾಚಕವು ಉತ್ತರಪದದ ನಾಮಪದದೊಡನೆ ಕೂಡಿ ಆಗುವ ಸಮಾಸ ಇದಾಗಿದೆ

(1) ಅಂಶಿ ಸಮಾಸ

(2) ಗಮಕ ಸಮಾಸ

(3) ಕ್ರಿಯಾ ಸಮಾಸ

(4) ದ್ವಿಗು ಸಮಾಸ

34. 'ಹೆಜ್ಜೇನು' ಪದದಲ್ಲಿ ಆಗಿರುವ ಸಮಾಸ ಯಾವುದು?

(1) ತತ್ಪುರುಷ

(2) ಗಮಕ

(3) ಕರ್ಮಧಾರೆಯ

(4) ಕ್ರಿಯಾ ಸಮಾಸ

35. 'ಸನ್ಮಾನ' ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ?

(1) ಗುಣ ಸಂಧಿ

(2) ಆಗಮ ಸಂಧಿ

(3) ಅನುನಾಸಿಕ ಸಂಧಿ

(4) ಆದೇಶ ಸಂಧಿ

36. ಸರಿಯಾದ ತತ್ಸಮ-ತದ್ಭವ ರೂಪ ಗುರುತಿಸಿ

(1) ಶರ್ಕರಾ-ಸಕ್ಕರೆ

(2) ವೃಷಭ-ವೃಸಬ

(3) ಜ್ವಾಲಾ-ಜ್ವಲ

(4) ಶಾಲಾ-ಸಾಲ

37. ಇವುಗಳಲ್ಲಿ ಯಾವುದು ಕನ್ನಡ ಪದವಲ್ಲ?

(1) ಮನೆ

(2) ನೇಸರ

(3) ಕುಮಾರ

(4) ನೀರು

SHIKARAT.COM

www.shikarat.com

38. 'ಅತ್ಯಾದರ' ಎನ್ನುವ ಪದದಲ್ಲಿ ಆಗಿರುವ ಸಂಧಿ ಯಾವುದು?

(1) ವೃದ್ಧಿ ಸಂಧಿ

(2) ಯಣ್ ಸಂಧಿ

(3) ಗುಣ ಸಂಧಿ

(4) ಸವರ್ಣದೀರ್ಘ ಸಂಧಿ

39. ಗುರು ಕೊನೆಯಲ್ಲಿ ಬರಲು ಈ ಗಣವಾಗುತ್ತದೆ ______.

(1) ಮಗಣ

(2) ಸಗಣ

(3) ತಗಣ

(4) ಜಗಣ

40. 'ಭ್ರಾತೃ' ಪದದ ಸಮಾನಾರ್ಥಕ ಪದ ______.

(1) ತಂದೆ

(2) ಸಹೋದರ

(3) ಮಾವ

(4) ಅಜ್ಜ

41. 'ನೆನಪಿನ ದೋಣಿಯಲ್ಲಿ' ಇದು ಕುವೆಂಪು ಅವರ ______.

(1) ಕಾದಂಬರಿ

(2) ನಾಟಕ

(3) ಕವನ ಸಂಕಲನ

(4) ಆತ್ಮ ಕಥೆ

42. 'ಒಗ್ಗಟ್ಟು' ಎನ್ನುವ ಪದದಲ್ಲಿ ಆಗಿರುವ ಸಮಾಸ ಇದಾಗಿದೆ ______.

(1) ದ್ವಿಗು

(2) ಗಮಕ

(3) ಅಂಶಿ

(4) ತತ್ಪುರುಷ

43. ಹಳೆಗನ್ನಡ 'ಸಪ್ತಮಿ' ವಿಭಕ್ತಿ ಪ್ರತ್ಯಯ ಯಾವುದು?

(1) ಅತ್ತಣಿಂ

(2) ಮ್

(3) ಒಳ್

(4) ಅಂ

[ P. T. O.

SHIKARAT.COM

www.shikarat.com

44. 'ಓಬಿರಾಯನ ಕಾಲ' ಈ ನುಡಿಗಟ್ಟಿನ ಅರ್ಥ ______.

(1) ನಷ್ಟದ ಕಾಲ

(2) ಕಷ್ಟದ ಕಾಲ

(3) ಪ್ರಾಚೀನ ಕಾಲ

(4) ನವೀನ ಕಾಲ

45. 'ಕಟ್ಟಳೆ' ಈ ಪದದ ಅರ್ಥ ______.

(1) ಕಟ್ಟುವುದು

(2) ಗಂಟುಹಾಕು

(3) ಕಡೆಗಣಿಸು

(4) ನಿಯಮ

46. ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ ______.

(1) ಅರ್ಧವಿರಾಮ

(2) ವಿವರಣಾತ್ಮಕ

(3) ಭಾವಸೂಚಕ

(4) ಉದ್ಧರಣ

47. 'ಬ್ಯಾನಿ' ಈ ಪದದ ಗ್ರಾಂಥಿಕ ರೂಪ ______.

(1) ಬಾನು

(2) ಬೇನೆ

(3) ಬ್ಯಾನೆ

(4) ಭಾನು

48. 'ಆಹಾ!' ಕಾಮನಬಿಲ್ಲು ಎಷ್ಟು ಸುಂದರವಾಗಿದೆ ಎನ್ನುವುದು ______.

(1) ಭಾವಸೂಚಕ ವಾಕ್ಯ

(2) ವಿಧ್ಯರ್ಥಕ ವಾಕ್ಯ

(3) ನಿಷೇಧಾರ್ಥಕ ವಾಕ್ಯ

(4) ಸಂಭಾವನಾರ್ಥಕ ವಾಕ್ಯ

49. ದೇಶ್ಯ ಶಬ್ದಗಳು ಎಂದರೆ ______.

(1) ಸಂಸ್ಕೃತದಿಂದ ಬಂದವು

(2) ಬೇರೆ ಭಾಷೆಯಿಂದ ಬಂದವು

(3) ಅಚ್ಚಗನ್ನಡದವು

(4) ಆಂಗ್ಲ ಭಾಷೆಯವು

SHIKARAT.COM

www.shikarat.com

50. ಇದು ಕರ್ಮಧಾರಯ ಸಮಾಸಕ್ಕೆ ಉದಾಹರಣೆ ______.

(1) ಬೆಟ್ಟದಾವರೆ

(2) ಕೆಂದಾವರೆ

(3) ಇಮ್ಮಡಿ

(4) ಆ ಮನೆ

51. ಇದು ಸಾಮಾನ್ಯ ಅವ್ಯಯಕ್ಕೆ ಉದಾಹರಣೆ ______.

(1) ಚೆನ್ನಾಗಿ

(2) ಆಹಾ!

(3) ಹೌದು

(4) ಪಟಪಟ

52. 'ಮರಳಿ ಮಣ್ಣಿಗೆ' ಇದು ಇವರ ಕೃತಿ ______.

(1) ಕೆ. ಶಿವರಾಮ ಕಾರಂತ

(2) ವಿನಾಯಕ ಕೃಷ್ಣ ಗೋಕಾಕ್

(3) ಎಂ. ಗೋಪಾಲಕೃಷ್ಣ ಅಡಿಗ

(4) ವೈದೇಹಿ

53. 'ಸುಪರ್ದಿ' ಈ ಪದದ ಅರ್ಥ ______.

(1) ಸಮರ್ಥ

(2) ಸುತ್ತಲೂ

(3) ವಶ

(4) ರಕ್ಷಣೆ

54. ಕೆಳಗಿನ ಅನ್ಯದೇಶ್ಯ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ :

(1) ಮೇಜು

(2) ಅರ್ಜಿ

(3) ಸಾಬೂನು

(4) ಪಾದ್ರಿ

55. 'ದೇವರಿಂದ' ಪದವನ್ನು ಬಿಡಿಸಿ ಬರೆಯುವ ಸರಿಯಾದ ರೂಪ

(1) ದೇವರ + ಇಂದ

(2) ದೇವರು + ಇಂದ

(3) ದೇವರು + ಯಿಂದ

(4) ದೇವರ + ಯಿಂದ

SHIKARAT.COM



[ P. T. O.

www.shikarat.com

56. ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಶಾಸನಗಳು ಯಾವ ಲಿಪಿಯಲ್ಲಿವೆ?

(1) ಬ್ರಾಹ್ಮಿ ಲಿಪಿ ಮತ್ತು ಸಂಸ್ಕೃತ ಲಿಪಿ

(2) ಸಂಸ್ಕೃತ ಲಿಪಿ ಮತ್ತು ಪ್ರಾಕೃತ ಲಿಪಿ

(3) ಬ್ರಾಹ್ಮಿ ಲಿಪಿ ಮತ್ತು ಪ್ರಾಕೃತ ಲಿಪಿ

(4) ಬ್ರಾಹ್ಮಿ ಲಿಪಿ ಮತ್ತು ಖರೋಷ್ಠಿ ಲಿಪಿ

57. ಸಂಧಿ ಎಂದರೆ ______.

(1) ಎರಡು ಪದಗಳು ಪರಸ್ಪರ ಕಾಲವಿಳಂಬವಿಲ್ಲದೆ ಸೇರುವುದು

(2) ಎರಡು ಅಕ್ಷರಗಳು ಪರಸ್ಪರ ಕಾಲವಿಳಂಬವಿಲ್ಲದೆ ಸೇರುವುದು

(3) ಎರಡು ಅಕ್ಷರಗಳು ಪರಸ್ಪರ ಕಾಲವಿಳಂಬದಿಂದ ಸೇರದಿರುವುದು

(4) ಎರಡು ಪದಗಳು ಪರಸ್ಪರ ಕಾಲವಿಳಂಬದಿಂದ ಸೇರದಿರುವುದು

58. ಕುಂಬಳ ಪದವು ______.

(1) ಅನ್ಯದೇಶ್ಯ

(2) ತತ್ಸಮ

(3) ತದ್ಭವ

(4) ಸಮ ಸಂಸ್ಕೃತ

59. ವಿಜಾತೀಯ ಸಂಯುಕ್ತಾಕ್ಷರವನ್ನು ಗುರುತಿಸಿ :

(1) ಅಣ್ಣ

(2) ಅಕ್ಕ

(3) ಹುತ್ತ

(4) ವಸ್ತ್ರ

60. ಕಂಠ ಮತ್ತು ತುಟಿಗಳ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳು ______.

(1) ಕಂಠತಾಲು

(2) ಕಂಠೋಷ್ಠ್ಯ

(3) ದಂತೋಷ್ಠ್ಯ

(4) ಕಂಠನಾಸಿಕ

SHIKARAT.COM

www.shikarat.com

61. ಮೂರು ಮಾತ್ರೆಗಳ ಕಾಲದಲ್ಲಿ ಉಚ್ಚರಿಸುವ ಅಕ್ಷರಗಳಿವು

(1) ಸ್ವರ

(2) ವ್ಯಂಜನ

(3) ಪ್ಲುತ ಸ್ವರ

(4) ಅನುಸ್ವಾರ

62. ಯಾವ ಸಾಹಿತ್ಯ ಪ್ರಕಾರವನ್ನು 'ಪ್ರಥಮ ಸಾಹಿತ್ಯ' ಎಂದು ಗುರುತಿಸಲಾಗಿದೆ?

(1) ಮಹಾಕಾವ್ಯ

(2) ಚಂಪೂ ಸಾಹಿತ್ಯ

(3) ಶಿಶು ಸಾಹಿತ್ಯ

(4) ಜನಪದ ಸಾಹಿತ್ಯ

63. ಮೈಸೂರಿನಲ್ಲಿ ಓರಿಯಂಟ್ ಲೈಬ್ರರಿ ಸ್ಥಾಪನೆಯಾದ ವರ್ಷ ______.

(1) 1885

(2) 1886

(3) 1887

(4) 1888

64. ನಾಮಪ್ರಕೃತಿ ಹಾಗೂ ಅನುಕರಣ ಶಬ್ದಗಳ ಮೇಲೆ 'ಇಸು' ಪ್ರತ್ಯಯ ಸೇರಿದಾಗ ಯಾವ ಧಾತು ಉಂಟಾಗುತ್ತದೆ?

(1) ಸಾಮಾನ್ಯ ಧಾತು

(2) ಪ್ರತ್ಯಯಾಂತ ಧಾತು

(3) ಮೂಲ ಧಾತು

(4) ಸಂಕೀರ್ಣ ಧಾತು

65. ಕರ್ಮಪದವನ್ನು ಅಪೇಕ್ಷಿಸುವ ಧಾತುಗಳನ್ನು ಏನೆಂದು ಕರೆಯಲಾಗುತ್ತದೆ?

(1) ಸಕರ್ಮಕ ಧಾತು

(2) ಅಕರ್ಮಕ ಧಾತು

(3) ಅವ್ಯಯ ಧಾತು

(4) ಕ್ರಿಯಾ ಪ್ರಕೃತಿ

SHIKARAT.COM

66. 'ನಾವು ಪ್ರತಿಜ್ಞೆಗೆ ತಪ್ಪದೆ ನಡೆಯುವೆವು' ಈ ವಾಕ್ಯದಲ್ಲಿರುವ ಧಾತುವನ್ನು ಗುರುತಿಸಿ :

(1) ತಪ್ಪು

(2) ನಾವು

(3) ಪ್ರತಿಜ್ಞೆ

(4) ನಡೆ

67. ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿದಾಗ ಆಗುವ ರೂಪ ಯಾವುದು?

(1) ಪದ

(2) ವಾಕ್ಯ

(3) ಪ್ರಬಂಧ

(4) ಧ್ವನಿ

68. "ಈ ತರಗತಿಯಲ್ಲಿ ಇಪ್ಪತ್ತು ಮಂದಿ ಹುಡುಗರಿದ್ದಾರೆ; ಇವರಲ್ಲಿ ಶಾಮಣ್ಣನು ಒಂದನೆಯವನು." ಗೆರೆ ಎಳೆದಿರುವ ಪದದ ವ್ಯಾಕರಣ ವಿಶೇಷತೆಯನ್ನು ಗುರುತಿಸಿ.

(1) ಪರಿಮಾಣ ವಾಚಕ

(2) ಸಂಖ್ಯಾವಾಚಕ

(3) ಪ್ರಕಾರ ವಾಚಕ

(4) ವಸ್ತು ವಾಚಕ

69. 'ಹಳ್ಳದಲ್ಲಿ ಬಿದ್ದನು-ಹಳ್ಳಕ್ಕೆ ಬಿದ್ದನು' ಈ ವಾಕ್ಯಗಳಲ್ಲಿರುವ ವಿಭಕ್ತಿ ಪಲ್ಲಟಗಳನ್ನು ಗುರುತಿಸಿ :

(1) ದ್ವಿತೀಯದಿಂದ ಷಷ್ಠಿ

(2) ಸಪ್ತಮಿಯಿಂದ ಷಷ್ಠಿ

(3) ಸಪ್ತಮಿಯಿಂದ ಚತುರ್ಥಿ

(4) ದ್ವಿತೀಯದಿಂದ ಚತುರ್ಥಿ

70. ನಿತ್ಯನಪುಂಸಕಲಿಂಗಕ್ಕೆ ಉದಾಹರಣೆಯನ್ನು ಕೊಟ್ಟಿರುವ ಆಯ್ಕೆಗಳಲ್ಲಿ ಗುರುತಿಸಿ :

(1) ಮನೆ

(2) ಹುಡುಗಿ

(3) ಶಿಲಿ

(4) ಶಿಶು

SHIKARAT.COM

ಹಚ್ಚೋಣ (a), ಹಣತೆಯ (b), ಕವಿಯುವ (c),
ಸುತ್ತಲೂ (d), ಕತ್ತಲೆಯೊಳಗೆ (e), ಪ್ರೀತಿಯ (f).

ಮೇಲಿನ ಪದಗಳನ್ನು ಅರ್ಥಪೂರ್ಣ ವಾಕ್ಯವಾಗಿಸುವ ಕ್ರಮ ಸಂಖ್ಯೆ

(1) c e d f b a

(2) d c e f b a

(3) d e c f b a

(4) d e f c b a

2. ಈ ಕೆಳಗಿನವುಗಳಲ್ಲಿ ಅನುನಾಸಿಕ ಸಂಧಿಗೆ ಉದಾಹಣೆ ______.

(1) ವಾಙ್ಮಯ

(2) ಜಗಜ್ಜ್ಯೋತಿ

(3) ಷಡಾನನ

(4) ವನೌಷಧಿ

73. 'ನೇಯ್ದ ವಸ್ತ್ರ' — ಇದು ಈ ಸಮಾಸಕ್ಕೆ ಉದಾಹರಣೆಯಾಗಿದೆ.

(1) ಗಮಕ ಸಮಾಸ

(2) ದ್ವಿಗು ಸಮಾಸ

(3) ಕರ್ಮಧಾರಯ ಸಮಾಸ

(4) ತತ್ಪುರುಷ ಸಮಾಸ

74. 'ಸಾವಿತ್ರಿಯು' ಈ ಪದವು ಈ ವಿಭಕ್ತಿಗೆ ಸೇರಿದೆ

(1) ಪ್ರಥಮಾ ವಿಭಕ್ತಿ

(2) ಸಪ್ತಮೀ ವಿಭಕ್ತಿ

(3) ಷಷ್ಠೀ ವಿಭಕ್ತಿ

(4) ತೃತೀಯಾ ವಿಭಕ್ತಿ

75. ಈ ಕೆಳಗಿನವುಗಳಲ್ಲಿ ಅಂಶಿ ಸಮಾಸಕ್ಕೆ ಉದಾಹರಣೆಯಾದ ಪದ ______.

(1) ತಲೆನೋವು

(2) ಹೊಸಗನ್ನಡ

(3) ಕಡೆಗಣ್ಣು

(4) ಕಣ್ದೆರೆ

www.shikarat.com

76. ಹೊಂದಿಸಿ ಬರೆಯಿರಿ :

| ಅ | ಬ |
|---|---|
| (a) ಭಾವಸೂಚಕ ಅವ್ಯಯ | (i) ಇರಲಾಗಿ |
| (b) ಕೃದಂತಾವ್ಯಯ | (ii) ನಾನೇ |
| (c) ತದ್ಧಿತಾಂತಾವ್ಯಯ | (iii) ಅಬ್ಬಾ |
| (d) ಅವಧಾರಣಾರ್ಥಕ ಅವ್ಯಯ | (iv) ತನಕ |

ಉತ್ತರಗಳ ಸೂಚಿ :

| | (a) | (b) | (c) | (d) |
|---|---|---|---|---|
| (1) | (iii) | (iv) | (ii) | (i) |
| (2) | (i) | (iii) | (iv) | (ii) |
| (3) | (iii) | (i) | (iv) | (ii) |
| (4) | (i) | (ii) | (iii) | (iv) |

77. ಅರ್ಥಪೂರ್ಣ ವಾಕ್ಯವನ್ನು ರಚಿಸಿರಿ :

ಮನಸ್ಸು ಸ್ವೇಚ್ಛಾಚಾರಿಯಾಗಿ ಬಂದತ್ತ ಸ್ಥಿತಿವಂತನೂ ಅಲೆಯುವಷ್ಟು ನಾನಲ್ಲ

(1) ಸ್ವೇಚ್ಛಾಚಾರಿಯಾಗಿ ಮನಸ್ಸು ಅಲೆಯುವಷ್ಟು ಬಂದತ್ತ ಸ್ಥಿತಿವಂತನೂ ನಾನಲ್ಲ.

(2) ಅಲೆಯುವಷ್ಟು ಮನಸ್ಸು ಸ್ವೇಚ್ಛಾಚಾರಿಯಾಗಿ ಬಂದತ್ತ ಸ್ಥಿತಿವಂತನೂ ನಾನಲ್ಲ.

(3) ಮನಸ್ಸು ಬಂದತ್ತ ಸ್ವೇಚ್ಛಾಚಾರಿಯಾಗಿ ಅಲೆಯುವಷ್ಟು ಸ್ಥಿತಿವಂತನೂ ನಾನಲ್ಲ.

(4) ನಾನಲ್ಲ ಸ್ಥಿತಿವಂತನೂ ಸ್ವೇಚ್ಛಾಚಾರಿಯಾಗಿ ಬಂದತ್ತ ಮನಸ್ಸು.

78. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು

(1) ವಾಕ್ಯವೇಷ್ಟನ ಚಿಹ್ನೆ

(2) ಅಲ್ಪವಿರಾಮ

(3) ವಿವರಣಾತ್ಮಕ ಚಿಹ್ನೆ

(4) ಅರ್ಧವಿರಾಮ

79. 'ಚಣ' ಪದದ ತತ್ಸಮ ರೂಪ _____.

(1) ಜಾಣ

(2) ಕಣ

(3) ಕ್ಷಣ

(4) ಕಾಣಾ

SHIKARAT.COM

www.shikarat.com

'ಚಳ್ಳೆಹಣ್ಣು ತಿನ್ನಿಸು' ಈ ನುಡಿಗಟ್ಟಿನ ಅರ್ಥ

(1) ಹಣ್ಣನ್ನು ತಿನ್ನಿಸು

(2) ಒಳ್ಳೆಯ ಹಣ್ಣನ್ನು ತಿನ್ನಿಸು

(3) ಮೋಸ ಮಾಡಿ ಹೋಗು

(4) ಚಿಕ್ಕ ಹಣ್ಣನ್ನು ತಿನ್ನಿಸು

1. 'ಮನ್ಯಾಗಿನ' ಈ ಪದದ ಗ್ರಾಂಥಿಕ ರೂಪ

(1) ಮನೆಯಿಂದಲೇ

(2) ಮನೆಯಲ್ಲಿನ

(3) ಮನೆ ಆಚೆಗಿನ

(4) ಮನದಲ್ಲಿನ

82. ಅಡಿ ಗೆರೆ ಎಳೆದ ಪದದ ಸರಿಯಾದ ರೂಪವನ್ನು ಗುರುತಿಸಿ :

ಅವರು ದಿನನಿತ್ಯ <u>ಸಂಧ್ಯಾವಂಧನೆಗಳನ್ನು</u> ಮಾಡುತ್ತಿದ್ದರು.

(1) ಸಂಧ್ಯಾವಂದನೆಗಳನ್ನು

(2) ಸಂದ್ಯಾವಂದನೆಗಳನ್ನು

(3) ಸಂಧ್ಯವಂದನೆಗಳನ್ನು

(4) ಸಂದ್ಯವಂಧನೆಗಳನ್ನು

83. ಮ್ : ಉ : : ಅತ್ತಣಿಂ : ?

(1) ದೆಸೆಯಿಂದ

(2) ಅನ್ನು

(3) ಆ

(4) ಗೆ

84. ಗಾದೆ ಪೂರ್ತಿಗೊಳಿಸಿ :

ಬರುವುದು ಕಡಿಮೆಯಾದರೂ ______

(1) ಇರುವುದು ತಪ್ಪಲಿಲ್ಲ

(2) ತೆರುವುದು ತಪ್ಪಲಿಲ್ಲ

(3) ಏನೂ ಉಳಿಸಲಿಲ್ಲ

(4) ಹೋಗುವುದು ತಪ್ಪಲಿಲ್ಲ

85. ಅಡಿಗೆರೆ ಎಳೆದ ಪದದ ವಚನ ಪಲ್ಲಟಕ್ಕೆ ಸರಿಯಾದ ವಚನ ಗುರುತಿಸಿ :

'ಶಿಕ್ಷಣ <u>ಎಲ್ಲ ರಂಗದಲ್ಲೂ</u> ಬದಲಾವಣೆ'

(1) ಎಲ್ಲ ರಂಗಗಳಲ್ಲೂ

(2) ಎಲ್ಲ ರಂಗಗಳಲ್ಲಿಯೂ

(3) ಎಲ್ಲ ರಂಗಗಳಲ್ಲಿ

(4) ಎಲ್ಲ ರಂಗಗಳ

SHIKARAT.COM

86. ಕೊಟ್ಟಿರುವ ಆಯ್ಕೆಗಳಲ್ಲಿ ವಿಶೇಷ್ಯಾಧೀನಲಿಂಗ ಅಥವಾ ವಾಚ್ಯಲಿಂಗಕ್ಕೆ ಉದಾಹರಣೆ ನೀಡಬಹುದಾದ ಪದವನ್ನು ಗುರುತಿಸಿ :

(1) ನಾನು ಬಂದೆ

(2) ನೀನು ಬಾ

(3) ನೀವು ಬನ್ನಿ

(4) ನಾನು ದೊಡ್ಡವಳು

87. ಪಂಪ ಪ್ರಶಸ್ತಿ ವಿಜೇತರನ್ನು ಕಾಲಾನುಕ್ರಮದಲ್ಲಿ ಗುರುತಿಸಿ :

*(a)* ಕುವೆಂಪು

*(b)* ತೀ.ನಂ. ಶ್ರೀಕಂಠಯ್ಯ

*(c)* ಶಿವರಾಮ ಕಾರಂತ

*(d)* ಪು.ತಿ. ನರಸಿಂಹಾಚಾರ್

(1) *(a) (c) (b) (d)*

(2) *(a) (b) (c) (d)*

(3) *(a) (d) (b) (c)*

(4) *(a) (c) (d) (b)*

88. ಕ್ರಿಯಾಪದವೆನಿಸಿಕೊಳ್ಳಲು ಧಾತುವಿಗೆ ಯಾವ ಪ್ರತ್ಯಯ ಸೇರಬೇಕು?

(1) ನಾಮ ಪ್ರತ್ಯಯ

(2) ಧಾತು ಪ್ರತ್ಯಯ

(3) ಆಖ್ಯಾತ ಪ್ರತ್ಯಯ

(4) ವಿಭಕ್ತಿ ಪ್ರತ್ಯಯ

89. 'ರವಿ ಕಾಣದ್ದನ್ನೂ ಕವಿ ಕಂಡ' ಈ ವಾಕ್ಯದಲ್ಲಿರುವ ಕೃದಂತನಾಮ ಯಾವುದು?

(1) ಭೂತಕಾಲದ ಕೃದಂತನಾಮ

(2) ಕೃದಂತ ಭಾವನಾಮ

(3) ನಿಷೇಧಾರ್ಥಕ ಕೃದಂತನಾಮ

(4) ತದ್ಧಿತಾಂತ ನಾಮ

90. 'ತಾನು ಕೋಡಗ, ಪರರನ್ನು ಅಣಕಿಸಿತು' ಈ ವಾಕ್ಯದಲ್ಲಿರುವ ಸರ್ವನಾಮವನ್ನು ಗುರುತಿಸಿ :

(1) ಪ್ರಶ್ನಾರ್ಥಕ ಸರ್ವನಾಮ

(2) ಆತ್ಮಾರ್ಥಕ ಸರ್ವನಾಮ

(3) ಪುರುಷಾರ್ಥಕ ಸರ್ವನಾಮ

(4) ನಿಷೇಧಾರ್ಥಕ ಸರ್ವನಾಮ

SHIKARAT.COM

www.shikarat.com

91. 'ಗ್ರೀಕ್ ಪ್ರಹಸನ ಕೃತಿಯು' ಯಾವ ದೇಶದಲ್ಲಿ ಲಭ್ಯವಾಗಿದೆ?

(1) ಗಾಂಧಾರ ದೇಶ

(2) ಈಜಿಪ್ಟ್ ದೇಶ

(3) ರುಮೇನಿಯಾ ದೇಶ

(4) ಬರ್ಮಾದೇಶ

92. ತೊಗಲುಗೊಂಬೆಯಾಟವನ್ನು ಆಡಿಸುವ ಜನಾಂಗದವರ ಹೆಸರೇನು?

(1) ಗೊಂದಲಿಗರು

(2) ಕಿಳ್ಳೆಕ್ಯಾತರು

(3) ನೀಲಗಾರರು

(4) ಬುಡಬುಡಿಕೆಯವರು

93. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ :

(1) ಬೆಟ್ಟದಾವರೆ

(2) ಮಳೆಗಾಲ

(3) ಕಂಬನಿ

(4) ಪೂವಿಂದ

94. 'ಕಪಿಮುಷ್ಟಿ' ಈ ನುಡಿಗಟ್ಟಿನ ಅರ್ಥ ತಿಳಿಸಿ:

(1) ಕಪಿಯ ಹಿಡಿತ

(2) ಬಿಗಿಯಾದ ಹಿಡಿತ

(3) ಕೋತಿಯ ಚೇಷ್ಟೆ

(4) ಹಿಡಿತದಿಂದ ಕಂಗಾಲಾಗು

95. ಅಡಿಗೆರೆ ಎಳೆದ ಪದದ ಸರಿಯಾದ ರೂಪ ಗುರುತಿಸಿ :

ಎಲ್ಲಿಯಾದರೂ, ಯಾರಾದರೊಬ್ಬ ಕತ್ರತ್ವವುಳ್ಳ ಅಥವಾ ವಿಚಾರವಂತ ವ್ಯಕ್ತಿ ಜನ್ಮ ತಾಳಿದರೆ ಸಾಕು–

(1) ಕರ್ತತ್ವವುಳ್ಳ

(2) ಕರ್ತೃತ್ವವುಳ್ಳ

(3) ಕರ್ತತ್ವಉಳ್ಳ

(4) ಕರ್ತೃತ್ವವುಳ್ಳ

SHIKARAT.COM



[ P. T. O.

www.shikarat.com

96. 'ಗೀಜಗನ ಗೂಡು ತೊಟ್ಟಿಲಿನಂತೆ ತೂಗುತ್ತಿದೆ' ಈ ಅಲಂಕಾರದಲ್ಲಿರುವ ಉಪಮಾನ ಪದ

(1) ಗೀಜಗನ ಗೂಡು

(2) ಅಂತೆ

(3) ತೊಟ್ಟಿಲು

(4) ತೂಗುತ್ತಿದೆ

97. ಈ ಕೆಳಗೆ ಅಡಿಗೆರೆ ಎಳೆದ ಪದ ಯಾವ ಅವ್ಯಯವಾಗಿದೆ?

ಭಲೇ ! ಪಂದ್ಯದಲ್ಲಿ ನಾವೇ ಗೆದ್ದೆವು.

(1) ಸಾಮಾನ್ಯ ಅವ್ಯಯ

(2) ಅವಧಾರಕಾರ್ಥಕ ಅವ್ಯಯ

(3) ಕ್ರಿಯಾರ್ಥಕ ಅವ್ಯಯ

(4) ಭಾವಸೂಚಕ ಅವ್ಯಯ

98. 'ಮಾಸ್ ಮೀಡಿಯಾ' (Mass Media) ಪದದ ಕನ್ನಡ ರೂಪ ______.

(1) ಸ್ವಂತ ಮಾಧ್ಯಮ

(2) ಸಮೂಹ ಮಾಧ್ಯಮ

(3) ಜಾಹೀರಾತು ಮಾಧ್ಯಮ

(4) ಮನರಂಜನಾ ಮಾಧ್ಯಮ

99. ಈ ಕೆಳಗಿನವುಗಳಲ್ಲಿ ಯಾವುದು ಗುಂಪಿಗೆ ಸೇರದ ಪದವಾಗಿದೆ?

(1) ತನಯ

(2) ತನುಜೆ

(3) ಸುತ

(4) ಸುಪುತ್ರ

100. 'ಬಿಸಿಲ್ಗುದುರೆ' ಪದದ ಅರ್ಥ ______.

(1) ಕಲ್ಪನೆ

(2) ನೆರಳು

(3) ಭ್ರಮೆ

(4) ಭಾವನೆ

SHIKARAT.COM